**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 25/2025**

**ಚಾ.ಸಾಃ 18, ಫ್ರಾ.ಸಾಃ 5**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀ ಸಿದ್ಧರಾಮೇಶ್ವರ |
| ತಂದೆಯ ಹೆಸರು | ಲೇಟ್ ಶಂಬಣ್ಣ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ಆರಕ್ಷಕ ನಿರೀಕ್ಷಕರು, ಹೊನ್ನಾವರ ಪೋಲೀಸ್ ಠಾಣೆ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 16-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 17-01-2025 ರಿಂದ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 17-01-2025 ರಂದು ಕೇಸಿನ ಕಡತವನ್ನು ಚಾಸಾ-17 ರಿಂದ ಪಡೆದುಕೊಂಡಿರುತ್ತೇನೆ.

ದಿನಾಂಕ 22-01-2025 ರಂದು ಆರೋಪಿ ಚಾಲಕನಿಗೆ ಕಲಂ 35BNSS ರಡಿಯಲ್ಲಿ ನೋಟೀಸು ನೀಡಿರುತ್ತೇನೆ.

ದಿನಾಂಕ 23-01-2025 ರಂದು ಆಟೋ ರಿಕ್ಷಾ ಸಂಖ್ಯೆ ಕೆಎ-47 ಎ/3826 ರ ಮಾಲೀಕರಾದ ಚಾಸಾ-8 ರವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಉತ್ತರ ಪಡೆದುಕೊಂಡಿರುತ್ತೇನೆ. ನೋಟೀಸನ್ನು ನೋಡುತ್ತಿದ್ದು ನಿಪಿ-10 ಎಂದು, ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು, ಉತ್ತರವನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಅದೇ ದಿನ ವಾಹನದ ಮಾಲೀಕರು ಆಟೋದ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಆರೋಪಿ ಚಾಲಕ ತಾನೇ ಸ್ವತಃ ಠಾಣೆಗೆ ಹಾಜರಾದ್ದರಿಂದ ಆತನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಆಟೋ ಮಾಲೀಕರಿಂದ ಇಂಡೆಮ್ನಿಟಿ ಬಾಂಡ್ ಪಡೆದು ಆಟೋವನ್ನು ಅವರ ಸ್ವಾದೀನಕ್ಕೆ ನೀಡಿರುತ್ತೇನೆ.

ದಿನಾಂಕ 18-03-2025 ರಂದು ಮೃತನ ಪಿಎಂ ವರದಿಯನ್ನು ಹೊನ್ನಾವರ ಸರಕಾರಿ ಆಸ್ಪತ್ರೆಯಿಂದ ಪಡೆದಿರುತ್ತೇನೆ. ಪಿಎಂ ವರದಿಯನ್ನು ಈಗ ನೋಡುತ್ತಿದ್ದು ನಿಪಿ-12 ಎಂದು ಗುರುತಿಸಲಾಯಿತು.

ದಿನಾಂಕ 20-03-2025ರಂದು ಆರೋಪಿ ಮತ್ತು ಗಾಯಾಳುವಿನ ಎರಡು ಗಾಯದ ಪ್ರಮಾಣಪತ್ರಗಳನ್ನು ಪಡೆದಿದ್ದು ಈಗ ಅವುಗಳನ್ನು ನೋಡುತ್ತಿದ್ದು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು.

ದಿನಾಂಕ 30-03-2025 ರಂದು ಐಎಂವಿ ವರದಿಯನ್ನು ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-15 ಎಂದು ಗುರುತಿಸಲಾಯಿತು. ಅದೇ ದಿನ ಮೃತನ ಸಾವಿನ ಕಾರಣದ ಅಂತಿಮ ಅಭಿಪ್ರಾಯವನ್ನು ಆಸ್ಪತ್ರೆಯಿಂದ ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ಪತ್ರ ಮತ್ತು ವರದಿಯನ್ನು ನಿಪಿ-16 ಮತ್ತು 17 ಎಂದು ಗುರುತಿಸಲಾಯಿತು.

ಅದೇ ದಿನ ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ನಾನು ಬಂಧಿಸಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ</u>**

ನನ್ನ ತನಿಖೆಯಲ್ಲಿ ಆರೋಪಿಯ ಯಾವುದೇ ನಿರ್ಲಕ್ಷತೆ ಇಲ್ಲ ಎಂದು ಕಂಡುಬಂದಿದ್ದರೂ ಸಹ ಮೃತರ ಕುಟುಂಬದವರಿಗೆ ಸಹಾಯವಾಗಲಿ ಎಂದು ಪ್ರಕರಣಕ್ಕೆ ಅನುಕೂಲ ಆಗುವ ಹಾಗೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**